ಕತೆಯನ್ನೂ ಹೇಳಿದಳು. ಅವಳೇನೋ ಆವತ್ತು ಹೊರಟುಹೋದಳು. ಆದರೆ ಅವಳ ಆಸೆ, ಉತ್ಸುಕತೆ, ಧೈರ್ಯ, ಜೀವನೋತ್ಸಾಹ ನನ್ನನ್ನು ಆಪ್ತವಾಗಿಸಿದುವು. ಎರಡು ಮೂರು ವರ್ಷಗಳ ನಂತರ ಅದಕ್ಕೇ ಒಂದು ಆವರಣ ಕಲ್ಪಿಸಿ ಕುಸುರಿ ನೇಯ್ದು ಕತೆ ಬರೆದೆ. ಅನುಭವಗಳು ಮೂರ್ತರೂಪದಲ್ಲೇ ಬರಬೇಕೆಂದೇನೂ ಇಲ್ಲ. ಸುಮಾರು 1924ರಲ್ಲಿ ರಚಿತವಾದ ಒಂದು ವ್ಯಾಕರಣ ಪುಸ್ತಕ ನನ್ನ ಕಣ್ಣಿಗೆ ಬಿದ್ದಿತ್ತು. ಅದರಲ್ಲಿ ಅರ್ಜಿಯ ಎರಡು ನಮೂನೆಗಳಿದ್ದುವು. ಆ ಅರ್ಜಿಗಳ ಭಾಷೆ ನನ್ನನ್ನು ತೀವ್ರವಾಗಿ ಆಕರ್ಷಿಸಿತು. ಅವುಗಳ ಪ್ರತಿ ಮಾಡಿಟ್ಟೆ. ಆ ಅರ್ಜಿಗಳಲ್ಲಿ ಕೆಲವು ಹೆಸರುಗಳಿದ್ದುವು. ನಾಮಸಂಬಂಧ ಅವರ ವೃತ್ತಿ, ಅರ್ಜಿಯ ಉದ್ದೇಶ ಎಲ್ಲ ನಮೂದಾಗಿದ್ದುವು. ಒಂದು ಅರ್ಜಿಯಲ್ಲಿ ಬರುವ ಹೆಸರುಗಳನ್ನು ತೆಗೆದುಕೊಂಡು ನಾನು 'ಅರ್ಜಿ' ಎನ್ನುವ ಕತೆ ಬರೆದೆ. ಅಂದರೆ ಪುಸ್ತಕದೊಳಗಿನ ಕೇವಲ ಹೆಸರು ನನ್ನ ಕತೆಯಲ್ಲಿ ಜೀವಂತವಾಯಿತು. ಮತ್ತೆ ಪುಸ್ತಕದೊಳಗೇ ಸರಿಯಿತು. ಆ ಕತೆ ಏಳೆಂಟು ಕಡೆ ಪ್ರಕಟವಾಯಿತು. ಒಳ್ಳೆಯ ವಿಮರ್ಶೆಯೂ ಬಂತು.

ಪ್ರತಿಯೊಬ್ಬ ಮನುಷ್ಯನೂ ಸ್ವಲಾಭಾನ್ವೇಷಕ. ನನ್ನ ಕತೆಗಳನ್ನು ಕೂಡಾ ಜನರು ಓದಬೇಕು, ಮೆಚ್ಚಬೇಕು, ವಿಮರ್ಶಕರು ಹೊಗಳಬೇಕು ಎನ್ನುವ ಒಳಗಿನ ಒಳಗಿನ ಆಸೆ ನನಗೂ ಇದೆ ನಿಜ. ಅಂದರೆ ವಿಮರ್ಶಕರ ಮಾತುಗಳಿಗೆ ತಲೆ ಕೆಡಿಸಿಕೊಳ್ಳುವುದಿಲ್ಲ ಅಂತ ಮೇಲೆ ಹೇಳಿದ ಮಾತಿಗೆ ವಿರುದ್ಧವಾದ ಹೇಳಿಕೆ ಎಂದು ಅನ್ನಿಸಬಹುದು. ಆದರೆ ಅದು ಪುಕ್ಕಟೆಯಾಗಿ ನನಗೆ ದೊರಕಬಾರದು ಎಂದು ಹೇಳುವುದು ನನ್ನ ಉದ್ದೇಶ. ನನ್ನ ಪ್ರಯತ್ನ, ಸಾಧನೆ ಎಷ್ಟಿದೆ? ಅದಕ್ಕಾಗಿ ಒಳ್ಳೆಯದನ್ನು ಕೊಡಲು ಒದ್ದಾಡುತ್ತೇನೆ. ನಾನು ಬರೆದದ್ದನ್ನೆಲ್ಲ ಮೆಚ್ಚಿ ಎನ್ನುವ ವಾದಕ್ಕಿಂತ ನೀವು ಮೆಚ್ಚುವ ಹಾಗೆ ಬರೆಯುತ್ತೇನೆ ಎಂದು ಸವಾಲೊಡ್ಡುವುದು ಆರೋಗ್ಯಕರ ಎಂದು ನಾನು ಭಾವಿಸುತ್ತೇನೆ. ಇದನ್ನು ಓದುವ ಮಂದಿ ನನಗಿಂತ ಬುದ್ಧಿವಂತರಿದ್ದಾರೆ, ಅವರು ಮೆಚ್ಚುವಂತೆ ಬರೆಯಬೇಕು ಅನ್ನುವ ಪ್ರಜ್ಞೆಯನ್ನು ಕಾಳಜಿಪೂರ್ವಕ ಅನುಷ್ಠಾನಕ್ಕೆ ತರಲು ಯತ್ನಿಸುತ್ತೇನೆ. ಒಂದು ಹಳೆಯ ಮಾತಿದೆ–ಜಗತ್ತಿನಲ್ಲಿರುವುದು ಒಂದೇ ಕತೆ, ಅದನ್ನೇ ಬೇರೆಬೇರೆಯವರು ಬೇರೆಬೇರೆ ರೀತಿಯಾಗಿ ಬರೆಯಲು ಪ್ರಯತ್ನಿಸುತ್ತಾರೆ, ಎಂದು. ನಾನೇ ನನ್ನ (ಒಂದೇ) ಕತೆಯನ್ನು ಹಲವು ರೀತಿಯಲ್ಲಿ ಹೇಳಲು ಪ್ರಯತ್ನಿಸಿದ್ದೇನೆ. ಇಂದೂ ಆ ಪ್ರಯತ್ನ ಜಾರಿಯಲ್ಲಿದೆ. ಕತೆ ಬರೆಯುವಾಗ ನಾನು ಹೇಳುವುದು ಸ್ಪಷ್ಟವಾಗಿದೆಯೋ ಇಲ್ಲವೋ ಎಂಬುದು ಮಾತ್ರ ನನ್ನೊಳಗೆ ಇರುತ್ತದೆ. ಕನ್ನಡ ಕಥಾಪರಂಪರೆಯಲ್ಲಿ, ಸಾಹಿತ್ಯದ ಇತಿಹಾಸದಲ್ಲಿ ಎಲ್ಲಿ ಸ್ಥಾನ ಪಡೆಯುತ್ತದೆ ಎಂದು ನಾನು ಎಳ್ಳಷ್ಟೂ ಚಿಂತಿಸುವುದಿಲ್ಲ. ಕತೆ ಬರೆಯುವಾಗಂತೂ ಅತ್ತ ನನ್ನ ಮನಸ್ಸು ಹೋಗುವುದೇ ಇಲ್ಲ.

ಆದರೆ ಕತೆ ಪ್ರಕಟವಾದಾಗ ಓದುಗರು, ವಿಮರ್ಶಕರು ಏನನ್ನುತ್ತಾರೆ ಎನ್ನುವ ಕುತೂಹಲವೂ ನನ್ನಲ್ಲಿ ಸಹಜವಾಗಿ ಇದೆ. ನನ್ನ ಒಂದೆರಡು ಕತೆಗಳ ಬಗ್ಗೆ ವಿಮರ್ಶಕರು ವಿಸ್ತೃತವಾಗಿ ಬರೆದರು. ಅವುಗಳಲ್ಲಿ ನಾನೇ ಉದ್ದೇಶಿಸಿರದ ಎರಡು ಮೂರು ಅರ್ಥಗಳನ್ನು ಕುರಿತು ಜಿಜ್ಞಾಸೆ ಮಾಡಿದರು. ಅದು ನನಗೆ ಆಶ್ಚರ್ಯ ತಂದಿತು. ನಮ್ಮ ವಿಮರ್ಶಕರೆಲ್ಲ ಬಹಳ ಒಳ್ಳೆಯವರೆಂದು ನನಗೆ ಅನ್ನಿಸುತ್ತದೆ. ಎಲ್ಲರೂ ಕೃತಿಯೊಳಗಿನ ಒಳ್ಳೆಯದನ್ನು ಮಾತ್ರ ಗುರುತಿಸುತ್ತಾರೆ. ಏನಾದರೂ ನ್ಯೂನತೆಗಳಿದ್ದಲ್ಲಿ ಅದನ್ನು ಮೃದುವಾಗಿ ವಿವರಿಸಿ ಮನಸ್ಸು ನೋಯದಂತೆ ಹೇಳುತ್ತಾರೆ. ನಾವು ಬೆಳೆಯಲು ಅದು ಸಹಕಾರಿಯಾಗುತ್ತದೆ. ನಿಷ್ಠುರ ಮಾತುಗಳನ್ನೆಂದೂ ಹಾಗೆಯೇ ಹೇಳುವುದಿಲ್ಲ. ವೈಯುಕ್ತಿಕವಾಗಿ ಹೇಳುವುದಾದರೆ ಅವರು